## 12. ನಮ್ಮ ದೇಶದ ಪರಿಸ್ಥಿತಿ ಅತ್ಯುತ್ತಮ : ಮೋದಿ

ಕೊರೋನಾ ವಿಚಾರದಲ್ಲಿ ವಿಶ್ವದ ಪರಿಸ್ಥಿತಿ ಉತ್ತಮವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ. ಮುಂಬೈ, ಕೋಲ್ಕತ್ತಾ ಹಾಗೂ ದೆಹಲಿ–ಎನ್‌ಸಿಆರ್‌ನಲ್ಲಿ ನೂತನವಾಗಿ ಸ್ಥಾಪಿಸಲಾಗಿರುವ ಮೂರು ಅತ್ಯಾಧುನಿಕ ಹಾಗೂ ಹೈ–ಎಂಡ್ ಕೊರೋನಾ ಪರೀಕ್ಷಾ ಕೇಂದ್ರಗಳಿಗೆ ವರ್ಚುವಲ್ ಮಾದರಿಯಲ್ಲಿ ಚಾಲನೆ ನೀಡಿದ ಅವರು ಕೊರೋನಾವನ್ನು ನಿಯಂತ್ರಿಸುವಲ್ಲಿ ನೆರವಾದ ದೇಶದ ಜನರಿಗೆ ಅವರು ಕೃತಜ್ಞತೆ ಸಲ್ಲಿಸಿದರು.

ದೆಹಲಿ–ಎನ್‌ಸಿಆರ್, ಮುಂಬೈ ಹಾಗೂ ಕೋಲ್ಕತ್ತಾ ನಗರಗಳು ದೇಶದ ಪ್ರಮುಖ ಆರ್ಥಿಕ ಚಟುವಟಿಕೆಗಳ ಕೇಂದ್ರಗಳಾಗಿವೆ. ದೇಶದ ಯುವಜನರಲ್ಲಿ ಅತಿ ಹೆಚ್ಚಿನವರು ತಮ್ಮ ಜೀವನ ರೂಪಿಸಿಕೊಳ್ಳಲು ಈ ನಗರಗಳಿಗೆ ಆಗಮಿಸುತ್ತಾರೆ. ಈ ನಗರಗಳಲ್ಲಿ ಇಂಥ ಅತ್ಯಾಧುನಿಕ ಲ್ಯಾಬ್‌ಗಳನ್ನು ಆರಂಭಿಸಿದರೆ ಹೆಚ್ಚು ಜನರಿಗೆ ಅನುಕೂಲವಾಗುತ್ತದೆ ಎಂದರು.

ಕೊರೋನಾ ಬಿಕ್ಕಟ್ಟು ನಮಗೆ ಹೊಸ ಪಾಠ ಕಲಿಸಿದೆ, ಮುಂದೆ ಇಂಥ ಸಂದರ್ಭಗಳು ದೇಶಕ್ಕೆ ಎದುರಾದಾಗ ಅದನ್ನು ಸಮರ್ಥವಾಗಿ ನಿಭಾಯಿಸುವಂತೆ ಸಿಬ್ಬಂದಿಯನ್ನು ನಾವು ರೂಪಿಸಬೇಕಿದೆ. ಈಗ ಕೊರೋನಾ ವಾರಿಯರ್‌ಗಳಾಗಿ ಸೇವೆ ಸಲ್ಲಿಸುತ್ತಿರುವ ವೈದ್ಯರು, ಆಸ್ಪತ್ರೆ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಪೌರ ಸಿಬ್ಬಂದಿಗೆ ಅತ್ಯುನ್ನತ ಮಟ್ಟದ ತರಬೇತಿ ನೀಡಲಾಗುತ್ತದೆ ಎಂದ

**ಎಲ್ಲೆಲ್ಲಿವೆ ಹೊಸ ಲ್ಯಾಬ್‌ಗಳು:**

- ಐಸಿಎಂಆರ್ –ನ್ಯಾಷನಲ್ ಇನ್ಸ್‌ಟ್ಯೂಟ್ ಆಫ್ ಕ್ಯಾನ್ಸರ್ ಪ್ರಿವೆನ್ಷನ್ ಆ್ಯಂಡ್ ರಿಸರ್ಚ್ (ನೊಯ್ಡಾ)
- ಐಸಿಎಂಆರ್ –ನ್ಯಾಷನಲ್ ಇನ್ಸ್ಟಿಟ್ಯೂಟ್ ಫಾರ್ ರಿಪ್ರೊಡಕ್ಟಿವ್ ಹೆಲ್ತ್ (ಮುಂಬೈ)
- ಐಸಿಎಂಆರ್ –ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಕಾಲರಾ ಆ್ಯಂಡ್ ಎಂಟೆರಿಕ್ ಡಿಸೀಸಸ್ (ಕೋಲ್ಕತ್ತಾ)

**ಹೊಸ ಲ್ಯಾಬ್‌ಗಳ ಪ್ರಾಮುಖ್ಯತೆ**

- ಮೂರು ಲ್ಯಾಬ್‌ಗಳಿಂದ ದಿನವೊಂದಕ್ಕೆ 10,000 ಜನರ ಪರೀಕ್ಷೆ.
- ಪ್ರತಿ ಸೋಂಕಿತನ ಪರೀಕ್ಷೆಗೆ ತೆಗೆದುಕೊಳ್ಳುವ ಸಮಯ ಅತಿ ಕಡಿಮೆ.
- ಸಿಬ್ಬಂದಿಗೆ ಕೊರೋನಾ ಬಾರದಂತಹ ಹೈಟೆಕ್ ರಕ್ಷಣೆ.
- ಕೊರೋನಾ ಕಾಲಘಟ್ಟ ಮುಗಿದ ನಂತರ ಈ ಲ್ಯಾಬ್‌ಗಳು ಹೆಪಾಟೆಟಿಸ್ ಬಿ ಮತ್ತು ಹೆಪಾಟೆಟಿಸ್ ಸಿ, ಎಚ್‌ಐವಿ., ಕ್ಷಯ ಹಾಗೂ ಡೆಂಘಿ ವೈರಾಣುಗಳ ಸಂಶೋಧನಾ ಕೇಂದ್ರಗಳಾಗಿ ಬದಲು.

ಆಧಾರ:ಉದಯವಾಣಿ, ದಿನಾಂಕ:28.07.2020